ನೆಲಮಂಗಲ ಕ್ಷೇತ್ರಕ್ಕೆ ಅಂಗನವಾಡಿ ಪ್ರಾರಂಭಿಸುವ ಕುರಿತಂ.

೧೨೫೭. ಶ್ರೀ, ಬಿ. ಗುರುಪ್ರಸಾದ್ (ನೆಲಮಂಗಲ)—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು?

ಆ) ಮಾಗಡಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳನ್ನು ವ್ಯಾಪ್ತಿಯಲ್ಲೂ ಸ್ಥಾಪಿಸಲ್ಪಟ್ಟಿವೆಯೇ? ಇಲ್ಲವಾದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಇ) ಹರಿಜನ, ಗಿರಿಜನ ನಿವಾಸಿಗಳ ಪ್ರದೇಶದಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸಲಾಗಿದೆಯೇ?

ಈ) ಹರಿಜನ, ಗಿರಿಜನ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳದವರ ಮೇಲೆ ಸರ್ಕಾರ ಏನು ಕ್ರಮ ಜರುಗಿಸುತ್ತಾರೆ?

ಶ್ರೀ. ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೬೫

ಆ) ಇಲ್ಲ.

ಮಾಗಡಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಈ ಯೋಜನಾ ವರ್ಷದೊಳಗೆ ಐಸಿಡಿಎಸ್ ಯೋಜನೆಯನ್ನು ಹಂತ ಹಂತವಾಗಿ ಪ್ರಾರಂಭಿಸಲು ಉದ್ದೇಶಿಲಾಗಿದೆ.

ಇ) ಅಂಗನವಾಡಿಗೆ ಕಟ್ಟಡ ದೊರೆಯುವಂತಹ ಹರಿಜನ, ಗಿರಿಜನ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ಸ್ಥಾಪಿಸಲಾಗುತ್ತಿದೆ.

ಈ) ಹರಿಜನ, ಗಿರಿಜನ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವಂತೆ ಎಲ್ಲಾ ಬಾಲ ವಿಕಾಸ ಯೋಜನಾಧಿಕಾರಿಗಳಿಗೆ ಸ್ಪಷ್ಟ ಸೂಚನೆಗಳೊಂದಿಗೆ ಕಳುಹಿಸಿ ಸೂಚನೆ ನೀಡಲಾಗಿದೆ.

೧೯೮೫-೮೬ ರವರೆಗೆ ಸರ್ಕಾರಿ ಮತ್ತು ಖಾಸಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರಾರಂಭಿಸಿದ ವಿದ್ಯಾರ್ಥಿನಿಲಯಗಳ ಬಗ್ಗೆ.

೧೨೫೯. ಶ್ರೀ. ಬಿ. ಎಂ. ತಿಪ್ಪೆಸ್ವಾಮಿ (ಭರಮಸಾಗರ). | ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬-೮೭ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಹೊಸದಾಗಿ ಪ್ರಾರಂಭ ಮಾಡಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು?

ಆ) ೧೯೫೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಆಡಳಿತ ಸಂಸ್ಥೆಯಂದರಿಂದ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಮಾಡಲು ಅರ್ಜಿ ಸಲ್ಲಿಸಿದ್ದಾರೆ?

ಶ್ರೀ ವಿ. ಎಲ್. ಪಾಟೀಲ್, (ಸಮಾಜ ಕಲ್ಯಾಣ ಸಚಿವರು).—

ಅ) ವೆಂಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಂಗಳು ವೆಂಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು

ವರ್ಷ	ಸರ್ಕಾರಿ	ಅನುದಾನಿತ	ಸರ್ಕಾರಿ	ಅನುದಾನಿತ	ಒಟ್ಟು
೧೯೫೫-೮೫	೫೦	೭	—	೧೪	೭೪
೧೯೮೫-೮೬	೨	೨೧	೨೫	೯	೫೭
೧೯೮೬-೮೭	—	೧	೨	೪	೮

ಆ) ವರ್ಷ	ಮೆಟ್ರಿಕ್‌ಪೂರ್ವ ಅನುದಾನಿತ ವಿದ್ಯಾರ್ಥಿನಿಲಯಗಳು	ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳು
೧೯೮೩–೮೪	೭	೧೪
೧೯೮೪–೮೫	೨೧	೨೦
೧೯೮೫–೮೬	೧೨	೧೬

ತುಂಗಭದ್ರ ಅಣೆಕಟ್ಟಿನ ನೀರಿನ ಸಂಗ್ರಹದ ಬಗ್ಗೆ

೧೫೪೭. ಶ್ರೀ ಕೆ. ವಿ. ರವೀಂದ್ರ ನಾಥ ಬಾಬು (ಕೊಟ್ಟೂರು), ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಭದ್ರಾ ಅಣೆಕಟ್ಟಿನ ನೀರಿನ ಸಂಗ್ರಹಣಾ ಸಾಮರ್ಥ್ಯವೆಷ್ಟು?

ಆ) ಜಲಾಶಯದಲ್ಲಿ ಹೂಳು ತುಂಬಿದ ನಂತರ ಹಾಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ವೆಷ್ಟು?

ಇ) ತುಂಗಭದ್ರಾ ಜಲಾಶಯದಿಂದ ಹೂಳು ತುಂಬಿರುವ ನಂತರ ಕರ್ನಾಟಕ ಹಾಗೂ ಆಂಧ್ರ ಪ್ರದೇಶಕ್ಕೆ ನೀರನ್ನು ವಿತರಣೆ ಮಾಡಲು ಪರಿಗಣಿಸುವ ಸಂಗ್ರಹಣಾ ಸಾಮರ್ಥ್ಯ ವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ತುಂಗಭದ್ರಾ ಅಣೆಕಟ್ಟು ೧೯೫೩ನೇ ಇಸವಿಯಲ್ಲಿ ಪೂರ್ಣಗೊಂಡಾಗ ಗರಿಷ್ಠ ಶೇಖರಣಾ ಸಾಮರ್ಥ್ಯ ೧೩೩ ಟಿ. ಎಂ. ಸಿ.

ಆ) ೧೯೮೧ನೇ ಇಸವಿಯಲ್ಲಿ ನಡೆಸಿದ ಸಮೀಕ್ಷಾ ವರದಿ ಪ್ರಕಾರ ಗರಿಷ್ಠ ಶೇಖರಣಾ ಸಾಮರ್ಥ್ಯ ೧೧೫.೬೮ ಟಿ.ಎಂ.ಸಿ.

ಇ) ಆ) ದಲ್ಲಿರುವಂತೆ.

ಅಂಗನವಾಡಿ ಕ್ಷೇತ್ರದಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸುವ ಬಗ್ಗೆ.

೧೫೩೦ ಶ್ರೀ. ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) ಮಾನ್ಯ(ಸಮಾಜ ಕಲ್ಯಾಣ ಸಚಿವರು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬ನೇ ಇಸ್ವಿಯಲ್ಲಿ ಕೇಂದ್ರ ಸರ್ಕಾರವು ಪ್ರತಿ ಹಳ್ಳಿಯಲ್ಲಿ ಅಥವಾ ಅಂಗನವಾಡಿ ಕ್ಷೇತ್ರದಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸಲು ಆದೇಶ ನೀಡಿದ್ದು ನಿಜವೆ?

ಆ) ಈ ಆದೇಶದ ಪ್ರಕಾರ ರಾಜ್ಯದಲ್ಲಿ ಸ್ಥಾಪಿಸಿದ ಮಹಿಳಾ ಮಂಡಳ ಸಂಖ್ಯೆ ಎಷ್ಟು?

ಇ) ಕೇಂದ್ರ ಸರ್ಕಾರವು ಈ ಮಹಿಳಾ ಮಂಡಳಿಗಳಿಗೆ ಪ್ರತಿ ಮಂಡಳಿಗೆ ಒಂದು ಸಾವಿರ ರೂಪಾಯಿಯಂತೆ ಆನಾವರ್ತ ಸಹಾಯಧನ ಕೊಡಬೇಕೆಂದು ಮತ್ತು ಈ ಖರ್ಚನ್ನು ಸಮಗ್ರ ಬಾಲವಿಕಾಸ ಯೋಜನೆಗೆ ನಿಗದಿಪಡಿಸಿದ ಆಯವ್ಯಯದಲ್ಲಿ ನಿಭಾಯಿಸಬೇಕೆಂದು ಆದೇಶ ನೀಡಿದ್ದು ನಿಜವೇ?

ಈ) ೧೯೮೬ ರಿಂದ ಇಲ್ಲಿಯವರೆಗೆ ಇಂತ ಮಹಿಳಾ ಮಂಡಳಿಗಳನ್ನು ಸ್ಥಾಪಿಸಲು ಖರ್ಚಾದ ಹಣ ಎಷ್ಟು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು)

ಅ) ಹೌದು.